ಕರ್ನಾಟಕ ವಿಧಾನ ಸಭೆ

ಶುಕ್ರವಾರ, ದಿನಾಂಕ ೬ನೇ ಫೆಬ್ರುವರಿ ೧೯೮೭

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೯-೦೦ ಘಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರ ಮಾವಿನಿ ಮತ್ತು ಶ್ರೀ ಆರ್. ವೆಂಕಟರಾಮಯ್ಯ ಅವರ ಪ್ರಶ್ನೆಯನ್ನು ಮತ್ತು ಮಾನ್ಯ ಸದಸ್ಯರಾದ ಶ್ರೀ ಸಿ. ಎಂ. ರೇವಣ್ಣ ಸಿದ್ದಯ್ಯ ಅವರ ಚುಕ್ಕೆ ಪ್ರಶ್ನೆ ೯೮(೨೮೧) ಮತ್ತು ಚುಕ್ಕೆ ಪ್ರಶ್ನೆ ಸಂಖ್ಯೆ ೯೯(೨೨೯)ನ್ನು ಈವತ್ತು ಮುಂದಕ್ಕೆ ಹಾಕಿದೆ.

ಮಹಿಳಾ ಹೊಲಿಗೆ ತರಬೇತಿ ಕೇಂದ್ರಗಳ ಬಗ್ಗೆ

೧೦೦(೨೯೭) ಶ್ರೀ ಟಿ.ಎಸ್. ಮಣಿ (ಕೆ.ಜಿ.ಎಫ್).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಸರ್ಕಾರದಿಂದ ನಡೆಸಲ್ಪಡುತ್ತಿರುವ ಮಹಿಳಾ ಹೊಲಿಗೆ ತರಬೇತಿ ಕೇಂದ್ರಗಳ ಸಂಖ್ಯೆ ಎಷ್ಟು ?

ಆ) ಇವುಗಳಲ್ಲಿ ಸರ್ಕಾರದ ಕೇಂದ್ರಗಳೆಷ್ಟು ?

ಇ) ೧೯೮೫-೮೬ ಮತ್ತು ೮೬-೮೭ನೇ ಸಾಲಿನಲ್ಲಿ ಸದರಿ ಕೇಂದ್ರಗಳಲ್ಲಿ ತರಬೇತಿ ಪಡೆದ ಪರಿಶಿಷ್ಟ ಜಾತಿ/ ಪರಿಶಿಷ್ಟ ಬುಡಕಟ್ಟು/ಹಿಂದುಳಿದ ವರ್ಗಗಳ ಅಭ್ಯರ್ಥಿಗಳ ಸಂಖ್ಯೆ ಎಷ್ಟು ?

ಈ) ಸದರಿ ಕೇಂದ್ರಗಳಲ್ಲಿ ತರಬೇತಿ ಪಡೆಯುವ ಮಹಿಳೆಯರಿಗೆ ನೀಡಲಾಗುತ್ತಿರುವ ಸೌಲಭ್ಯಗಳೇನು ?

ಉ) ಮೇಲ್ಕಂಡ ಸೌಲಭ್ಯಗಳನ್ನು ಒದಗಿಸುವಲ್ಲಿ ಸರ್ಕಾರಿ ಹೊಲಿಗೆ ಕೇಂದ್ರಗಳು ಮತ್ತು ಖಾಸಗಿ ಹೊಲಿಗೆ ಕೇಂದ್ರಗಳ ನಡುವೆ ವ್ಯತ್ಯಾಸವಿದೆಯೇ ? ಇದ್ದರೆ ಮಾಹಿತಿ ನೀಡುವುದು.

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಸಮಾಜ ಕಲ್ಯಾಣ ನಿರ್ದೇಶನಾಲಯದ ವತಿಯಿಂದ ಹೊಲಿಗೆ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿಲ್ಲ. ಆದರೂ ರಾಜ್ಯದಲ್ಲಿ ಒಟ್ಟು ೨೧ ತರಬೇತಿ ಕೇಂದ್ರಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮುಖೇನ ಅನುದಾನ ಯೋಜನೆಯಡಿಯಲ್ಲಿ ನಡೆಸಲಾಗುತ್ತಿದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ನಿರ್ದೇಶನಾಲಯದ ವತಿಯಿಂದ ೬೦ ಹೊಲಿಗೆ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ.

ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆಯ ನಿರ್ದೇಶನಾಲಯದ ವತಿಯಿಂದ ೧೭ ಮಹಿಳಾ ಹೊಲಿಗೆ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ.

ಆ) ಒಟ್ಟು ಸರ್ಕಾರದ ವತಿಯಿಂದ ೭೭ ಕೇಂದ್ರಗಳು ನಡೆಸಲಾಗುತ್ತಿವೆ.

ಇ) ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶನಾಲಯದ ವತಿಯಿಂದ ಯೋಜನೆಯಡಿಯಲ್ಲಿ ನಡೆಸಲಾಗುತ್ತಿರುವ ಯೋಜನೆಯು ಜಾತಿ ಆಧಾರ ಪಂಗಡ ಭೇದವಿಲ್ಲದೆ ನಿರ್ಗತಿಕ ಮಹಿಳೆಯರಿಗಾಗಿ ತರಲಾಗಿದೆ. ೧೯೮೫-೮೬ನೇ ಸಾಲಿನಲ್ಲಿ ಒಟ್ಟು ೪೯೮ ಜನ ಹಾಗೂ ೧೯೮೬-೮೭ನೇ ಸಾಲಿನಲ್ಲಿ ಡಿಸೆಂಬರ್ ೧೯೮೬ ರವರೆಗೆ ೫೦೦ ಜನ ನಿರ್ಗತಿಕ ಮಹಿಳೆಯರು ಯೋಜನೆಯಡಿಯಲ್ಲಿ ತರಬೇತಿ ಪಡೆದಿದ್ದಾರೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಇಲಾಖೆ:

೧೯೮೫-೮೬ನೇ ಸಾಲಿನಲ್ಲಿ ೧೧೯೧ ಮಹಿಳೆಯರಿಗೆ
೧೯೮೬-೮೭ನೇ ಸಾಲಿನಲ್ಲಿ ೧೧೮೫ ಮಹಿಳೆಯರಿಗೆ ತರಬೇತಿ ಕೊಡಲಾಗುತ್ತಿದೆ.

ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆಯ ವತಿಯಿಂದ:

೧೯೮೫-೮೬ನೇ ಸಾಲಿನಲ್ಲಿ ಒಟ್ಟು ೩೧೯ ಮಹಿಳೆಯರು ತರಬೇತಿ ಪಡೆದಿದ್ದಾರೆ.
೧೯೮೬-೮೭ನೇ ಸಾಲಿನಲ್ಲಿ ಒಟ್ಟು ೩೨೫ ಮಹಿಳೆಯರು ತರಬೇತಿ ಪಡೆಯುತ್ತಿದ್ದಾರೆ.

ಈ) ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ತರಬೇತಿದಾರರಿಗೆ ವಸತಿ ಸೌಲಭ್ಯವನ್ನು ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ನೀಡಲಾಗುವುದು. ಮತ್ತು ಪ್ರತಿಯೊಬ್ಬ ತರಬೇತಿದಾರರಿಗೆ ಮಾಸಿಕವಾಗಿ ೭೫-೦೦ ರೂ. ಗಳನ್ನು ವಿದ್ಯಾರ್ಥಿ ವೇತನವಾಗಿ ನೀಡಲಾಗುವುದು. ಮತ್ತು ತರಬೇತಿ ಮುಗಿದ ತಕ್ಷಣ ಪುನರ್ ವಸತಿ ಸಹಾಯಧನವಾಗಿ ರೂ. ೫೦೦-೦೦ ಗಳನ್ನು ತರಬೇತಿದಾರರಿಗೆ ಸ್ವಯಂಉದ್ಯೋಗ ಕಲ್ಪಿಸಿಕೊಳ್ಳಲು ನೀಡಲಾಗುವುದು.

ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡಗಳ ಇಲಾಖೆಯ ವತಿಯಿಂದ ತರಬೇತಿ ಅವಧಿಯಲ್ಲಿ ಮಹಿಳೆಯರಿಗೆ ೭೫-೦೦ ರೂ. ಗಳನ್ನು ಸೈಫೆಂಡ್ ಕೊಡಲಾಗುತ್ತದೆ.

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವತಿಯಿಂದ ಪ್ರತಿ ಅಭ್ಯರ್ಥಿಗಳಿಗೆ ೭೫-೦೦ ರೂ. ಗಳಂತೆ, ಒಂದು ವರ್ಷದ ಕಾಲ ತರಬೇತಿ ಭತ್ಯ ನೀಡಲಾಗುವುದು. ವರ್ಷಾಂತ್ಯದಲ್ಲಿ ಪರೀಕ್ಷೆ ನಡೆಸಿ ಉತ್ತೀರ್ಣರಾದವರಿಗೆ ಅರ್ಹತಾ ಪತ್ರವನ್ನು ನೀಡಲಾಗುವುದು. ಮತ್ತು ಅಧಿಸೂಚನೆಯಿಂದ ತೆಗೆದು ಪಾಕಲ್ಪಟ್ಟ ಗಿರಿಜನರಿಗಾಗಿ ನಡೆಸಲ್ಪಡುತ್ತಿರುವ ಕೇಂದ್ರಗಳಲ್ಲಿ ತರಬೇತಿ ಪಡೆದ ತೇರ್ಗಡೆಯಾದವರಿಗೆ ಅರ್ಹತಾ ಪತ್ರದ ಜೊತೆಗೆ ಒಂದು ಹೊಲಿಗೆ ಯಂತ್ರವನ್ನು ಉಚಿತವಾಗಿ ನೀಡಲಾಗುವುದು.

ಇಲಾಖೆಯಿಂದ ಅಂಗೀಕೃತವಾದ ಖಾಸಗಿ ಹೊಲಿಗೆ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆಯುವ ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಒಂದು ದಿನಕ್ಕೆ ರೂ. ೨ ರಂತೆ ಒಂದು ವರ್ಷಕಾಲ ತರಬೇತಿ ಭತ್ಯವನ್ನು ನೀಡಲಾಗುತ್ತದೆ.

ಉ) ಸರಕಾರಿ ಹೊಲಿಗೆ ಕೇಂದ್ರಗಳಲ್ಲಿರುವ ಮತ್ತು ಅನುದಾನ ಪಡೆಯುವ ಕೇಂದ್ರಗಳಲ್ಲಿರುವ ಸೌಲಭ್ಯಗಳನ್ನು ಮೇಲಿನ ಉತ್ತರಗಳಲ್ಲಿ ತಿಳಿಸಿರುತ್ತದೆ.

ಖಾಸಗಿ ಹೊಲಿಗೆ ಕೇಂದ್ರಗಳಲ್ಲಿ ಕೊಡುವ ಇತರ ಸೌಲಭ್ಯಗಳ ಬಗ್ಗೆ ಮಾಹಿತಿ ಇರುವುದಿಲ್ಲ.

SRI T. S. MANI.—Sir, how many tailoring trining centres run by private people are there in the State ?

SRI G. BASAVANNAPPA.—Totally there are 98 centres, out of which 37 are run by private people.

SRI T.S. MANI.—Whether any malpractices are reported in these institutions and if so, what action has been taken by the Government ?

SRI G. BASAVANNAPPA.—No such complaints have come to Government so far. If the hon. Members brings any such malpractices to the notice of the Government, the Government, will certainly take action.

SRI T.S. MANI.—Why not the Government think of taking over of private centres ?

SRI G. BASAVANNAPPA.—Sir, the Government is encouraging voluntry organisations to take up such works and that is the reason why we are providing financial assistance to them.

ಸಂಡೂರಿನ ತಾಲ್ಲೂಕಾ ಕಛೇರಿ ಕಟ್ಟಡದ ಬಗ್ಗೆ

೧೦೨ (೩೫೯) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಸಂಡೂರಿನಲ್ಲಿ ತಾಲ್ಲೂಕು ಕಛೇರಿ ಕಟ್ಟಡವನ್ನು ನಿರ್ಮಿಸಲು ಸರಕಾರದವರು ಯೋಜಿಸಿದ್ದಾರೆಯೇ ?

ಆ) ಹಾಗಿದ್ದಲ್ಲಿ ೧೯೮೫-೮೬ರ ಆಯವ್ಯಯದಲ್ಲಿ ಎಷ್ಟು ಹಣವನ್ನು ಕಟ್ಟಡ ನಿರ್ಮಾಣಕ್ಕಾಗಿ ನಿಗದಿಪಡಿಸಲಾಗಿತ್ತು ?

ಇ) ತಾಲ್ಲೂಕು ಕಛೇರಿ ಕಟ್ಟಡ ನಿರ್ಮಾಣ ಯಾವಾಗಿನಿಂದ ಪ್ರಾರಂಭಿಸಲಾಗುವುದು ಹಾಗೂ ಈ ಕಟ್ಟಡದ ಅಂದಾಜು ವೆಚ್ಚವೆಷ್ಟು ?

ಶ್ರೀ ಎಸ್.ಆರ್. ಬೊಮ್ಮಾಯಿ (ಯೋಜನಾ ಹಾಗೂ ಕಾರ್ಮಿಕ ಕಂದಾಯ ಸಚಿವರು).—

ಅ) ಹೌದು,

ಆ) ಇಲ್ಲ.

ಇ) ರೂ. ೧೮,೫೫ ಲಕ್ಷ, ಕಟ್ಟಡದ ನಿರ್ಮಾಣ ೫ನೇ ಪ್ರಾರಂಭಿಸಲಾಗುವುದು.

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ವರ್ಷದಲ್ಲಿ ೫ ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೇವೆ. ಆದಷ್ಟು ಜಾಗ್ರತೆ ಈ ಕೆಲಸ ಪ್ರಾರಂಭ ಮಾಡುತ್ತೇವೆ.

ಶ್ರೀ ಯು. ಭೂಪತಿ.—ಇಲ್ಲಿಯವರೆಗೆ ಸಂಡೂರು ತಾಲ್ಲೂಕ್ ಆಫೀಸನ್ನು ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿದ್ದಾರೆ. ಬಾಡಿಗೆ ಇಲ್ಲಿಯವರೆಗೆ ಎಷ್ಟು ಕೊಟ್ಟಿದ್ದಾರೆ ? ಒಂದು ತಿಂಗಳಿಗೆ ಬಾಡಿಗೆ ಎಷ್ಟು ನಿಗದಿಯಾಗಿತ್ತು ? ಎಂಬುದನ್ನು ಹೇಳುತ್ತೀರಾ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಆ ವಿವರ ಇಲ್ಲ. ಈ ವರ್ಷ ಕಟ್ಟಡ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಬಜೆಟ್‌ನಲ್ಲಿ ೫ ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೇವೆ.

ಶ್ರೀ ಯು. ಭೂಪತಿ.—ಮೊನ್ನೆ ಇದೇ ರೀತಿ ಪ್ರಶ್ನೆ ಬಂದಾಗ ಲೋಕೋಪಯೋಗಿ ಸಚಿವರು ಉತ್ತರ ಕೊಡುತ್ತಾ ಮಿನಿ ವಿಧಾನಸೌಧ ಕಟ್ಟುವುದಿಲ್ಲ ಎಂದು ಹೇಳಿದರು. ತಾಲ್ಲೂಕು ಕಚೇರಿ ಕಟ್ಟಡದ ಪ್ಲಾನ್ ಕಳುಹಿಸಿದಾಗ ಇದು ಬೇಡ, ಮಿನಿ ವಿಧಾನಸೌಧ ಕಟ್ಟಬೇಕು. ಆ ರೀತಿ ಸ್ಕೆಚ್ ಕಳುಹಿಸಿ ಎಂದು ಲೋಕೋಪಯೋಗಿ ಇಲಾಖೆಗೆ ಪಾಪಸ್ ಕಳುಹಿಸಿದ್ದಾರೆ. ಆ ಕಾರಣದಿಂದ ತಾವು ಮಿನಿ ವಿಧಾನಸೌಧ ಕಟ್ಟುತ್ತೀರಾ ? ಅಥವಾ ಹಳೇ ರೀತಿ ಕಟ್ಟುತ್ತೀರಾ ಎಂಬುದನ್ನು ಹೇಳಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ತಹಸೀಲ್ದಾರ್ ಆಫೀಸಿಗೆ ಅವಶ್ಯವಿದ್ದ ಕಟ್ಟಡ ಕಟ್ಟಬೇಕು, ಅದನ್ನು ಕಟ್ಟುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಲ್ಲೆಲ್ಲಿ ರಾಜ್ಯದಲ್ಲಿ ತಾಲ್ಲೂಕ್ ಆಫೀಸ್ ಕಟ್ಟಡ ಇಲ್ಲ, ಸಬ್‌ಡಿವಿಜನ್ ಆಫೀಸ್ ಇಲ್ಲ, ಡೆಪ್ಯುಟಿ ಕಮಿಷನರ್ ಆಫೀಸ್ ಇಲ್ಲ ಆ ಕಡೆ ಇಂಥ ಕಟ್ಟಡಗಳನ್ನು ಕಟ್ಟಿಸಬೇಕೆಂದು ಸುಮಾರು ೪ ಜಿಲ್ಲೆಯಲ್ಲಿ ಮಂಜೂರಾತಿ ಕೊಟ್ಟು ಕೆಲಸ ಪ್ರಾರಂಭವಾಗಿದೆ. ಕೆಲವು ತಾಲ್ಲೂಕಿನಲ್ಲಿ ಐದಾರು ಕಡೆ ಮಿನಿ ವಿಧಾನಸೌಧ ಎಂದು ಹೆಸರಿಸಿ ಕೆಲಸ ಮಾಡಬೇಕೆಂದಿದ್ದರು. ತಾಲ್ಲೂಕ್ ಆಫೀಸ್, ಡಿಸ್ಟ್ರಿಕ್ಟ್ ಆಫೀಸ್ ಎಂದು ಹೆಸರು ಏತಕ್ಕೆ ಕಲ್ಲಿನ ಕಟ್ಟಡವನ್ನು ಈ ಟೈಮಿನಲ್ಲಿ ಕಟ್ಟಬೇಕು ಎಂಬ ದೃಷ್ಟಿಯಿಂದ ಮಿನಿ ವಿಧಾನಸೌಧ ಎಂಬ ಹೆಸರನ್ನು ಕೊಟ್ಟಿತ್ತು. ಮೊನ್ನೆ